ಸೆಲೆಬ್ರಿಟಿ
ಹನಿ

# ದಾಖಲೆವೀರ ಲಿಯಾಂಡರ್

ಮೊನ್ನೆ ಜೂನ್ ತಿಂಗಳಲ್ಲಿ ಲಿಯಾಂಡರ್ ಪೇಸ್‌ಗೆ 43 ತುಂಬಿತು. 20 ವರ್ಷಗಳ ಹಿಂದೆ ಅಟ್ಲಾಂಟಾ ಒಲಿಂಪಿಕ್ಸ್ ನಲ್ಲಿ ಭಾರತಕ್ಕೆ ಟೆನಿಸ್ ಕಂಚಿನ ಪದಕ ತಂದುಕೊಟ್ಟ ಲಿಯಾಂಡರ್, ಈಗಲೂ ಟೆನಿಸ್ ಕೋರ್ಟ್‌ನಲ್ಲಿ 'ಫಿಟ್ ಆ್ಯಂಡ್ ಟಫ್' ಎನ್ನುವುದು ಸೋಜಿಗದ ಸಂಗತಿಯೇ. ಟೆನಿಸ್ ಅತ್ಯಧಿಕ ದೈಹಿಕ ಸಾಮರ್ಥ್ಯ ಬೇಡುವ ಆಟ. ಸಾಮಾನ್ಯವಾಗಿ 30–35ರಲ್ಲಿ ಆಟಗಾರರು ನಿವೃತ್ತಿ ಆಗಲೇಬೇಕು. ಅದನ್ನೂ ಮೀರಿ 40ರಲ್ಲೂ ಆಟವಾಡುವವರು ನಿಜಕ್ಕೂ ಭುಜಬಲ ಪರಾಕ್ರಮಿಗಳೇ. ಈಗ 43ರ ಹರೆಯದಲ್ಲಿ ಪೇಸ್ ಒಲಿಂಪಿಕ್ಸ್‌ನಲ್ಲಿ ಭಾರತದ ಪರ ಡಬಲ್ಸ್ ಆಡುತ್ತಿರುವುದು ರೋಮಾಂಚನದ ಸಂಗತಿ. ಸಮಕಾಲೀನ ಆಟಗಾರರೆಲ್ಲ ಬೂಟು ತೆಗೆದಿಟ್ಟು ತಮ್ಮದೇ ಆದ ಕಂಪೆನಿಗಳನ್ನು ಹುಟ್ಟು ಹಾಕಿಯೋ ಅಥವಾ ಜಾಹೀರಾತುಗಳಲ್ಲಿ ಮುಳುಗಿದ್ದರೂ, ಲಿಯಾಂಡರ್ ಇನ್ನೂ ಟೆನಿಸ್ ಕೋರ್ಟ್‌ನಿಂದ ಈಚೆ ಬಂದಿಲ್ಲ. ಲಿಯಾಂಡರ್ ಏಳನೇ ಬಾರಿ ಒಲಿಂಪಿಕ್ಸ್ ನಲ್ಲಿ ಭಾರತವನ್ನು ಪ್ರತಿನಿಧಿಸುತ್ತಿರುವುದೂ ಒಂದು ದಾಖಲೆಯೇ. ಹೀಗೆ 7 ಬಾರಿ ಭಾರತವನ್ನು ಒಲಿಂಪಿಕ್ಸ್‌ನಲ್ಲಿ ಪ್ರತಿನಿಧಿಸಿದ ಮೊದಲ ಆಟಗಾರನೀತ. ಜತೆಗೆ ಒಲಿಂಪಿಕ್ಸ್ ನಲ್ಲಿ ಟೆನಿಸ್ ಆಟಗಾರನೊಬ್ಬ ಏಳನೇ ಬಾರಿ ಆಡುತ್ತಿರುವುದೂ ಒಂದು ವಿಶ್ವದಾಖಲೆಯೇ.

ಈ ಬರಹ ಓದುವ ಹೊತ್ತಿಗೆ ಟೆನಿಸ್ ಡಬಲ್ಸ್ ಮೊದಲ ಸುತ್ತಿನ ಸ್ಪರ್ಧೆಗಳು ಮುಗಿದಿರುತ್ತವೆ. ಫಲಿತಾಂಶ ಏನೇ ಇರಲಿ, ಲಿಯಾಂಡರ್ ನಿಜಕ್ಕೂ ಭಾರತದ ಹೆಮ್ಮೆ. 1996ರಲ್ಲಿ ಲಿಯಾಂಡರ್ ಒಲಿಂಪಿಕ್ಸ್ ಟೆನಿಸ್‌ನಲ್ಲಿ ಕಂಚು ಗೆದ್ದಾಗ ಅದೊಂದು ಬಹುದೊಡ್ಡ ಸಾಧನೆ. ಏಕೆಂದರೆ 1952ರಲ್ಲಿ ಹೆಲ್ಸಿಂಕಿಯಲ್ಲಿ ನಡೆದ ಒಲಿಂಪಿಕ್ಸ್‌ನ ಕುಸ್ತಿ ಸ್ಪರ್ಧೆಯಲ್ಲಿ ಕೆ.ಸಿ.ಜಾಧವ್ ಕಂಚಿನ ಪದಕ ಗೆದ್ದ ಬಳಿಕ ಅಲ್ಲಿವರೆಗೆ ಯಾವ ಭಾರತೀಯರೂ ಪದಕ ಗೆದ್ದಿರಲಿಲ್ಲ. ಲಿಯಾಂಡರ್‌ಗೆ ಅದು ಸಾಧ್ಯವಾದದ್ದು ಇಡೀ ಭಾರತಕ್ಕೆ ಖುಷಿ ತಂದಿತ್ತು. ಅವತ್ತು ಪದಕ ವಿಜೇತರ ಸಾಲಿನಲ್ಲಿ ಟೆನಿಸ್ ರಂಗದ ದಿಗ್ಗಜರಾದ ಆ್ಯಂಡ್ರೂ ಅಗಾಸ್ಸಿ ಮತ್ತು ಸರ್ಗಿ ಬ್ರುಗೆರಾ ಜತೆಗೆ ನಿಂತು ಲಿಯಾಂಡರ್ ಕಂಚಿನ ಪದಕ ಚುಂಬಿಸಿದ್ದು ಇವತ್ತಿಗೂ ಅಭಿಮಾನಿಗಳಿಗೆ ಕಣ್ಣಿಗೆ ಕಟ್ಟುವ ಚಿತ್ರ. 1972ರ ಮ್ಯೂನಿಕ್ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗೆದ್ದ ಭಾರತದ ಹಾಕಿ ತಂಡದಲ್ಲಿ ಲಿಯಾಂಡರ್ ಅಪ್ಪ ವೀಸ್ ಪೇಸ್ ಆಟಗಾರನಾಗಿದ್ದ. ಒಂದೇ ಮನೆಯಲ್ಲಿ ಎರಡು ಒಲಿಂಪಿಕ್ಸ್ ಪದಕದ ಅಪರೂಪದ ಖುಷಿಯೂ ಅದಾಗಿತ್ತು.

ಈ ಸಲದ್ದು ಡಬಲ್ಸ್ ಪಂದ್ಯ. ಲಿಯಾಂಡರ್ ಜತೆಗಾರ ರೋಹನ್ ಬೋಪಣ್ಣ. ಇಬ್ಬರ ನಡುವೆ ಅಂತಹ ಒಳ್ಳೆಯ ಸ್ನೇಹ ಇಲ್ಲ ಎನ್ನುವುದು ಈಗಾಗಲೆ ಜಗಜ್ಜಾಹೀರಾಗಿದೆ. ನಮ್ಮ ತಂಡ ಒಲಿಂಪಿಕ್ಸ್ ನಡೆಯುವ ರಿಯೋ ನಗರಕ್ಕೆ ತಲುಪುವ ಮುನ್ನವೇ ಇಬ್ಬರ ನಡುವಣ ಜಗಳ ಬಹಿರಂಗಗೊಂಡಿದೆ. 'ನಾನು ಬೋಪಣ್ಣ ಜತೆಗೆ ಕ್ರೀಡಾಗ್ರಾಮದಲ್ಲಿ ಒಂದೇ ಫ್ಲ್ಯಾಟ್‌ನಲ್ಲಿ ವಾಸಿಸುವುದಿಲ್ಲ' ಎಂದು ಲಿಯಾಂಡರ್ ಹೇಳಿದ್ದು ಸುದ್ದಿಯಾಗಿದೆ. ಹಾಗೆ ನೋಡಿದರೆ ಲಿಯಾಂಡರ್ ಭಾರತ ತಂಡದ ಬಹುತೇಕ ಟೆನಿಸ್ ಆಟಗಾರರ ಜತೆಗೆ ಜಗಳ ಮಾಡಿದವರೇ. ಮಹೇಶ್ ಭೂಪತಿ ಜತೆಗೆ ಡಬಲ್ಸ್ ಆಡುವಾಗಲೂ ಇಬ್ಬರ ನಡುವಣ ಶರಂಪರ ಜಗಳ ಸುದ್ದಿಯಾಗಿತ್ತು. ಮಿಕ್ಸೆಡ್ ಡಬಲ್ಸ್ ನಲ್ಲಿ ಲಿಯಾಂಡರ್ ಜತೆಗೆ ಆಟವಾಡಲು ಸಾನಿಯಾ ಮಿರ್ಜಾ ನಿರಾಕರಿಸಿದ್ದೂ ಭಾರಿ ಚರ್ಚೆ ಹುಟ್ಟು ಹಾಕಿತ್ತು. ಈ ಜಗಳದಲ್ಲಿ ತಪ್ಪು ಯಾರದ್ದು ಎನ್ನುವುದನ್ನು ಹುಡುಕುವುದು ಅಷ್ಟು ಸುಲಭದ ಕೆಲಸವಲ್ಲ. ಜಾಗತಿಕ ಮಟ್ಟದಲ್ಲಿ ಹೆಸರು, ಕೀರ್ತಿ ಎಲ್ಲವೂ ಬಂದ ಬಳಿಕ ಆಟಗಾರರ ಮಧ್ಯೆ ಪ್ರತಿಷ್ಠೆಯ ಪ್ರಶ್ನೆ ಹಣುಕಿ ಹಾಕುವುದು ಸಹಜವೇ.

ಪತ್ನಿ ರಿಹಾ ಪಿಳ್ಳೈ ಜತೆಗಿನ ಲಿಯಾಂಡರ್ ಜಗಳದ ಬಗ್ಗೆಯೂ ಮಾಧ್ಯಮಗಳಲ್ಲಿ ಸಾಕಷ್ಟು ಸುದ್ದಿಗಳು ಪ್ರಕಟವಾಗಿವೆ. ಮಗಳ ಮೇಲಿನ ಹಕ್ಕಿಗಾಗಿ ಗಂಡ– ಹೆಂಡತಿ ಕೋರ್ಟು ಮೆಟ್ಟಲು ಹತ್ತಿರುವುದು ಇನ್ನೂ ಬಗೆಹರಿದಿಲ್ಲ. ಈ ಮಧ್ಯೆ ಒಲಿಂಪಿಕ್ಸ್ ಪ್ರವಾಸ ಹೊರಟ ಬೆನ್ನಲ್ಲೆ ಲಿಯಾಂಡರ್, ಜೂನಿಯರ್ ಟೆನಿಸ್ ಆಟಗಾರ್ತಿಯೊಬ್ಬಳ ಜತೆಗೆ ಪ್ರೇಮದಲ್ಲಿ ಬಿದ್ದಿದ್ದಾರೆ ಎನ್ನುವ ಹೊಸ ಗಾಳಿಸುದ್ದಿಯೂ ಜೋರಾಗಿ ಹಬ್ಬಿದೆ. ಬಿಡುವಿಲ್ಲದಂತೆ ಟೆನಿಸ್ ಆಡುತ್ತಾ ಒಂದು ಖಂಡದಿಂದ ಇನ್ನೊಂದು ಖಂಡಕ್ಕೆ ಜಿಗಿಯುತ್ತಿರುವ ಲಿಯಾಂಡರ್‌ಗೆ ಈ ಗಾಳಿಸುದ್ದಿಗಳಿಗೆ ಪ್ರತಿಕ್ರಿಯೆ ನೀಡುವಷ್ಟು ಪುರುಸೊತ್ತಿಲ್ಲ ಎನ್ನುವುದೂ ನಿಜ.

'ವಯಸ್ಸು ಎನ್ನುವುದು ಒಂದು ಅಂಕಿ ಮಾತ್ರ. ಆಟದಲ್ಲಿ ನನ್ನ ಮೋಹ ನನ್ನನ್ನು ಈ ಎತ್ತರಕ್ಕೆ ತಂದು ನಿಲ್ಲಿಸಿದೆ. ಆಟದ ಮೋಹಕ್ಕಾಗಿ ನಾನು ಏನು ಮಾಡಲೂ ಸಿದ್ಧ' ಎನ್ನುವುದು ಆರನೇ ಒಲಿಂಪಿಕ್ಸ್‌ಗೆ ಹೋಗುವ ಮುನ್ನ ಲಿಯಾಂಡರ್ ಮಾಧ್ಯಮಗಳಿಗೆ ಹೇಳಿದ ಮಾತು. ಅದು ನಿಜವೂ ಹೌದು. ಜೊತೆಯಾಟಕ್ಕೆ ಸಿಗುವ ಜತೆಗಾರರ ಜತೆಗೆ ಕೋರ್ಟ್ ಹೊರಗೆ ಎಷ್ಟೇ ಜಗಳವಾಡಿದರೂ, ಲಿಯಾಂಡರ್ ಕೋರ್ಟ್ ಒಳಗೆ ಅದ್ಭುತವೇ. ಆತನ ದೈಹಿಕ ಕ್ಷಮತೆ ಮತ್ತು ಮಾನಸಿಕ ಏಕಾಗ್ರತೆಯ ಬಗ್ಗೆ ಎರಡು ಮಾತೇ ಇಲ್ಲ!



Printed and Published by B.A. Ravi on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65